Test Paper : **III**

Test Subject : **PHILOSOPHY**

Test Subject Code : **K-3617**

Test Booklet Serial No. : ____________________

OMR Sheet No. : ____________________

Roll No.

(Figures as per admission card)

**Name & Signature of Invigilator/s**

Signature : ____________________

Name : ____________________

**Paper : III**

**Subject : PHILOSOPHY**

Time : 2 Hours 30 Minutes | Maximum Marks : 150

Number of Pages in this Booklet : **24** | Number of Questions in this Booklet : **75**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಎಪ್ಪತ್ತೈದು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ:** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆಗಳಿಗೆ ಉತ್ತರಗಳನ್ನು, **ಪತ್ರಿಕೆ III ಪುಸ್ತಿಕೆಯೊಳಗೆ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ಮಾತ್ರವೇ ಸೂಚಿಸತಕ್ಕದ್ದು.** OMR ಹಾಳೆಯಲ್ಲಿನ ಅಂಡಾಕೃತಿ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

**Instructions for the Candidates**

1. Write your roll number in the space provided on the top of this page.
2. This paper consists of seventy five multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the question of Paper III are to be indicated in the **OMR Sheet kept inside the Booklet**. If you mark at any place other than in the circles in OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, Electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

# ತತ್ವಶಾಸ್ತ್ರ

## ಪೇಪರ್ – III

**ಗಮನಿಸಿ :** ಈ ಪತ್ರಿಕೆಯು **(75) ಎಪ್ಪತ್ತೈದು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** ಬೌದ್ಧರು ವ್ಯಾಪ್ತಿಯನ್ನು ____________ ಆಧಾರದ ಮೇಲೆ ನಿರ್ಧರಿಸುತ್ತಾರೆ.

(A) ಕಾರ್ಯಕಾರಣ ನಿಯಮ ಮತ್ತು ತಾದಾತ್ಮ್ಯ ಸಂಬಂಧ

(B) ಸಹಚರ್ಯ ನಿಯಮ ಮತ್ತು ಸಮರ್ಥ ಕಾರಣ ನಿಯಮ

(C) ತಾದಾತ್ಮ್ಯ ನಿಯಮ ಮತ್ತು ಸಹಚರ್ಯ ನಿಯಮ

(D) ಕಾರ್ಯಕಾರಣ ನಿಯಮ ಮತ್ತು ಸಹಚರ್ಯ ನಿಯಮ

**2.** ತ್ರೀವಾಕ್ಯನುಮಾನದ ಆಕೃತಿಯು ____________ ಸ್ಥಾನದಿಂದ ನಿರ್ಧರಿಸಲ್ಪಡುತ್ತದೆ.

(A) ಮಧ್ಯಮ ಪದ

(B) ಸಾಧ್ಯಪದ

(C) ಪಕ್ಷಪದ

(D) ಕ್ರಿಯಾಪದ

**3.** ''ಶಬ್ದವು ಶಾಶ್ವತ ಏಕೆಂದರೆ ಅದು ಉತ್ಪನ್ನವಾಗಿದೆ'' ಇದು ಹೆತ್ವಾಭಾಸಕ್ಕೆ ಉದಾಹರಣೆ

(A) ವಿರುದ್ಧ

(B) ಅಸಿದ್ಧ

(C) ಬಾಧಿತ

(D) ಸತ್‌ಪ್ರತಿಪಕ್ಷ

**4.** SEP ವಾಕ್ಯದಲ್ಲಿ ಯಾವ ಪದ ಅಥವಾ ಪದಗಳ ವ್ಯಾಪ್ತಿಯಾಗಿದೆ ?

(A) ಕೇವಲ S

(B) ಕೇವಲ P

(C) S ಮತ್ತು Pಗಳು ಎರಡೂ

(D) S ಅಲ್ಲ ಮತ್ತು Pಯೂ ಅಲ್ಲ

**5.** ಕೆಳಕಂಡ ಪ್ರತಿಜ್ಞೆಗಳನ್ನು ಪರಿಶೀಲಿಸಿ :

ಯಾವ ಭಾರತೀಯನು ಅಮೇರಿಕಾನಲ್ಲ

ಶ್ರೀ X ಅಮೇರಿಕಾನಲ್ಲ

ಮೇಲಿನ ಪ್ರತಿಜ್ಞೆಗಳಿಂದ

(A) ಸರಿಯಾದ ತೀರ್ಮಾನವನ್ನು ಪಡೆಯಬಹುದು

(B) ತೀರ್ಮಾನವನ್ನು ಪಡೆಯಬಹುದಾದರೂ ಆ ತೀರ್ಮಾನವೂ ಯತಾರ್ಥವಲ್ಲ

(C) ತೀರ್ಮಾನವನ್ನು ಪಡೆಯಬಹುದಾದರೂ ಅದು ಸಂಶಯಾತ್ಮಕ

(D) ಯಾವ ತೀರ್ಮಾನವನ್ನು ಪಡೆಯಲು ಸಾಧ್ಯವಿಲ್ಲ

**6.** $p \vee q$ ಕೆಳಕಂಡ ಸಂದರ್ಭಗಳಲ್ಲಿ ಅಸತ್ಯವಾಗುತ್ತದೆ

(A) p ಮತ್ತು qಗಳೆರಡು ಸತ್ಯವಾದಾಗ

(B) p ಸತ್ಯವಿದ್ದು q ಅಸತ್ಯವಾದಾಗ

(C) pಯು ಅಸತ್ಯ ಮತ್ತು q ಸತ್ಯವಾದಾಗ

(D) p ಮತ್ತು q ಎರಡು ಅಸತ್ಯವಾದಾಗ

# PHILOSOPHY

## PAPER – III

**Note :** This paper contains **seventy-five (75)** objective type questions. **Each** question carries **two (2)** marks. **All** questions are **compulsory**.

**1.** Buddhist determine Vyapti on the basis of

(A) Principle of essential identity and causality

(B) Association and sufficient reason

(C) Essential identity and association

(D) Causality and association

**2.** The figure of a syllogism is determined by the position of

(A) Middle term

(B) Major term

(C) Minor term

(D) Copula

**3.** "The sound is eternal because it is caused" is an example of __________ hetvabhasa.

(A) Viruddha

(B) Asiddha

(C) Badhita

(D) Satpratipaksha

**4.** In SEP which term/terms are distributed ?

(A) Only S

(B) Only P

(C) Both S and P

(D) Neither S nor P

**5.** Consider the following premises :

No Indian is an American

Mr. X is not an American

From the above premises

(A) A valid conclusion can be drawn

(B) A conclusion can be drawn but it is invalid

(C) A conclusion can be drawn but it is doubtful

(D) No conclusion can be drawn

**6.** $p \vee q$ is false when

(A) both p and q are true

(B) p is true and q is false

(C) p is false and q is true

(D) both p and q are false

**7.** Aಯು ಸತ್ಯವಾಗಿದ್ದು ಮತ್ತು X ಅಸತ್ಯವಾದಾಗ $\sim (A \vee X)$ ____________ ಆಗುತ್ತದೆ.

(A) ನಿಜ

(B) ಸುಳ್ಳು

(C) ಸಂಶಯಾಸ್ಪದ

(D) ನಿಜ ಮತ್ತು ಸುಳ್ಳುಗಳೆರಡೂ

**8.** ಕೆಳಗಿನ ವಾಕ್ಯಗಳಲ್ಲಿ ಯಾವುದು E ವಾಕ್ಯವಾಗಿದೆ ?

(A) ಎಲ್ಲಾ ಮಾನವರು ಬುದ್ಧಿವಂತರು

(B) ಕೆಲವು ಮಾನವರು ಬುದ್ಧಿವಂತರಲ್ಲ

(C) ಕೆಲವು ಮಾನವರು ಬುದ್ಧಿವಂತರು

(D) ಯಾವ ಮಾನವನು ಬುದ್ಧಿವಂತನಲ್ಲ

**9.** ಕೆಳಗಿನವುಗಳಲ್ಲಿ ಮಿತ ವಿರೋಧಿಗಳನ್ನು ಆರಿಸಿ.

I. A ಮತ್ತು E

II. I ಮತ್ತು O

III. A ಮತ್ತು I

IV. E ಮತ್ತು O

**ಸಂಕೇತಗಳು :**

(A) I, II

(B) II, III

(C) III, IV

(D) IV, I

**10.** ಅನ್ಯಥಾ ಖ್ಯಾತಿಯನ್ನು ____________ ಎತ್ತಿಹಿಡಿಯುತ್ತದೆ.

(A) ಬೌದ್ಧ ದರ್ಶನ (B) ಜೈನ ದರ್ಶನ

(C) ನ್ಯಾಯ ದರ್ಶನ (D) ಸಾಂಖ್ಯ ದರ್ಶನ

**11.** ಕೆಳಕಂಡ ವಾದವನ್ನು ಕೊಟ್ಟಿರುವ ಆಯ್ಕೆಗಳಿಂದ ಗುರುತಿಸಿ :

ಮಳೆಯು ಸರಿಯಾಗಿ ಬಂದರೆ ಬೆಳೆಯು ಬರುತ್ತದೆ.

ಬೆಳೆಯು ಬರುವುದಿಲ್ಲ.

$\therefore$ ಮಳೆಯು ಸರಿಯಾಗಿ ಬಂದಿಲ್ಲ.

(A) $\begin{array}{c} p \supset q \\ \sim p \\ \hline \therefore q \end{array}$ (B) $\begin{array}{c} p.q \\ p \\ \hline \therefore q \end{array}$

(C) $\begin{array}{c} p \supset q \\ \sim q \\ \hline \therefore \sim p \end{array}$ (D) $\begin{array}{c} p \vee q \\ \sim q \\ \hline \therefore p \end{array}$

**12.** ಹೊಂದಿಸಿ ಬರೆಯಿರಿ :

a. ಮೊಡಸ್ ಪೊನೆನ್ಸ್ i. $\begin{array}{c} p \supset q \\ \sim q \\ \hline \therefore \sim p \end{array}$

b. ಮೊಡಸ್ ಟೊಲೆನ್ಸ್ ii. $\begin{array}{c} p \supset q \\ p \\ \hline \therefore q \end{array}$

c. ಹೈಪೋತೆಟಿಕಲ್ ಸಿಲೋಜಿಜಂ iii. $\begin{array}{c} p \vee q \\ \sim q \\ \hline \therefore q \end{array}$

d. ಡಿಸ್‌ಜಂಕ್ಟಿವ್ ಸಿಲೋಜಿಜಂ iv. $\begin{array}{c} p \supset q \\ q \supset r \\ \hline \therefore p \supset r \end{array}$

**ಸಂಕೇತಗಳು :**

| | a | b | c | d |
|---|---|---|---|---|
| (A) | ii | i | iv | iii |
| (B) | i | iv | iii | ii |
| (C) | iv | iii | ii | i |
| (D) | iii | ii | i | iv |

**7.** If A is true and X is false then $\sim (A \vee X)$ is

(A) True

(B) False

(C) Doubtful

(D) Both true and false

**8.** Indicate which of the following propositions refers to E proposition ?

(A) All men are intelligent

(B) Some men are not intelligent

(C) Some men are intelligent

(D) No men are intelligent

**9.** Select the sub alterns.

I. A and E

II. I and O

III. A and I

IV. E and O

**Codes :**

(A) I, II

(B) II, III

(C) III, IV

(D) IV, I

**10.** Anyatha Khyati is upheld by

(A) Buddhism (B) Jainism

(C) Nyaya (D) Samkhya

**11.** Choose the argument from among the choices of the following argument :

If it rains properly, the crops will grow.

The crops do not grow.

∴ It has not rained properly.

(A) $\dfrac{p \supset q \quad \sim p}{\therefore q}$

(B) $\dfrac{p.q \quad p}{\therefore q}$

(C) $\dfrac{p \supset q \quad \sim q}{\therefore \sim p}$

(D) $\dfrac{p \vee q \quad \sim q}{\therefore p}$

**12.** Match the following :

a. Modus ponens — i. $\dfrac{p \supset q \quad \sim q}{\therefore \sim p}$

b. Modus tollens — ii. $\dfrac{p \supset q \quad p}{\therefore q}$

c. Hypothetical syllogism — iii. $\dfrac{p \vee q \quad \sim q}{\therefore q}$

d. Disjunctive syllogism — iv. $\dfrac{p \supset q \quad q \supset r}{\therefore p \supset r}$

**Codes :**

| | a | b | c | d |
|---|---|---|---|---|
| (A) | ii | i | iv | iii |
| (B) | i | iv | iii | ii |
| (C) | iv | iii | ii | i |
| (D) | iii | ii | i | iv |

**13.** ಯಾವುದಾದರೂ ಆಧಾರ ವಾಕ್ಯವು ನಕಾರಾತ್ಮಕವಾಗಿದ್ದರೆ ತೀರ್ಮಾನವು ___________ ಆಗಿರಬೇಕು.

(A) ಸಕಾರಾತ್ಮಕ (B) ನಕಾರಾತ್ಮಕ

(C) ಸಾರ್ವತ್ರಿಕ (D) ಪ್ರತ್ಯೇಕ

**14.** ಪ್ರತ್ಯೇಕ ವಾಕ್ಯಗಳಿಂದ

(A) ಯಾವ ತೀರ್ಮಾನ ವಾಕ್ಯವನ್ನು ಕಂಡುಕೊಳ್ಳಲಾಗುವುದಿಲ್ಲ

(B) ಪ್ರತ್ಯೇಕ ತೀರ್ಮಾನ ವಾಕ್ಯವನ್ನು ಕಂಡುಹಿಡಿಯಬಹುದು

(C) ಸಾರ್ವತ್ರಿಕ ತೀರ್ಮಾನ ವಾಕ್ಯವನ್ನು ಕಂಡುಹಿಡಿಯಬಹುದು

(D) ನಕಾರಾತ್ಮಕ ತೀರ್ಮಾನ ವಾಕ್ಯವನ್ನು ಕಂಡುಹಿಡಿಯಬಹುದು

**15.** ಪದಗಳ ಸ್ಥಾನಪಲ್ಲಟವಿರುವ ಅವ್ಯವಹಿತ ಅನುಮಾನವನ್ನು_________ ಎಂದು ಕರೆಯುತ್ತಾರೆ.

(A) ತ್ರಿವಾಕ್ಯನುಮಾನ (B) ಪರಿವರ್ತನೆ

(C) ಪ್ರತಿವರ್ತನೆ (D) ವಿಗಮನ

**16.** ಕೆಳಗಿನ ಹೇಳಿಕೆಯನ್ನು ಪರಿಗಣಿಸಿರಿ. ಹೇಳಿಕೆ (A) ಮತ್ತು ಕಾರಣ (R) ಮತ್ತು ಸರಿಯಾದ ಉತ್ತರವನ್ನು ಹೇಳಿರಿ.

**ಹೇಳಿಕೆ (A)** : ಕಾಲಿಕ ಪ್ರಕ್ರಿಯೆಯು ಒಂದು ವಾಸ್ತವಿಕ ಪ್ರಕ್ರಿಯೆ.

**ಕಾರಣ (R)** : ಸತ್ಯವು ಕಾಲಿಕ ಬದಲಾವಣೆಗಳ ಮೂಲಕ ವ್ಯಕ್ತವಾಗುತ್ತದೆ.

(A) (A) ಮತ್ತು (R) ಎರಡೂ ಸತ್ಯ

(B) (A) ಮತ್ತು (R) ಎರಡೂ ಅಸತ್ಯ

(C) (A) ಸತ್ಯವಾಗಿದೆ ಮತ್ತು (R) ಅದರ ಸರಿಯಾದ ವಿವರಣೆಯಲ್ಲ

(D) (A) ಅಸತ್ಯವಾಗಿದೆ ಮತ್ತು (R) ಅದರ ಸರಿಯಾದ ವಿವರಣೆ

**17.** ಅತೀತ ಪ್ರಜ್ಞೆಯು ಹುಸೆರಲ್‌ನ ಪ್ರಕಾರ ಈ ಶಬ್ದದಿಂದ ಗುರುತಿಸಲ್ಪಡುತ್ತದೆ

(A) ಅತೀತ ವ್ಯಕ್ತಿ ನಿಷ್ಠತೆ

(B) ಅತೀತ ಅವಗ್ರಹ ಐಕ್ಯತೆ

(C) ಭಾವನೆಗಳ ಸತ್ವಗಳು

(D) ಭಾವನೆಗಳ ಅನಿಸಿಕೆಗಳು

**18.** ಸೋಫಿಷ್ಟರು ಈ ಹೇಳಿಕೆಯನ್ನು ನೀಡುವುದಿಲ್ಲ

(A) ಜ್ಞಾನವನ್ನು ನಿರ್ಧರಿಸುವಲ್ಲಿ ವ್ಯಕ್ತಿಯೇ ಅಳತೆಗೋಲು

(B) ಎರಡು ವಿರುದ್ಧ ಹೇಳಿಕೆಗಳು ಸತ್ಯವಾಗಬಹುದು

(C) ಮನುಷ್ಯನೇ ಎಲ್ಲಾ ವಸ್ತುಗಳ ಮಾನದಂಡವಾಗಿದ್ದಾನೆ

(D) ಜ್ಞಾನವೇ ಸದ್ಗುಣ

**19.** ಅದ್ವೈತದ ಪ್ರಕಾರ ವೇದಗಳು___________ ಆಗಿವೆ.

(A) ಪೌರುಷೇಯ

(B) ಅಪೌರುಷೇಯ

(C) ಪೌರುಷೇಯ ಮತ್ತು ಅಪೌರುಷೇಯ

(D) ಪೌರುಷೇಯ ಅಲ್ಲ ಅಪೌರುಷೇಯ ಅಲ್ಲ

**20.** ''ಓಂ'' ಎನ್ನುವುದು ___________ ಚಿನ್ಹೆಯಾಗಿದೆ.

(A) ಮೂರ್ತತ್ವ

(B) ಪೂರ್ಣತ್ವ

(C) ಬ್ರಹ್ಮ, ವಿಷ್ಣು , ಮಹೇಶ್ವರ

(D) ನೇತಿ ನೇತಿ

**21.** ಜ್ಞಾನವೆಂದರೆ ಸತ್ಯವಾದ ನಂಬಿಕೆ ಪ್ಲಸ್ ಲೋಗೋಸ್ ಇದು ___________ ನಿಲುವು.

(A) ಸಾಕ್ರೆಟೀಸ್ (B) ಪ್ಲೇಟೋ

(C) ಅರಿಸ್ಟಾಟಲ್ (D) ಥಾಲಿಸ್

**13.** If one of the premises is negative the conclusion must be

(A) Affirmative (B) Negative

(C) Universal (D) Particular

**14.** From two particular premises

(A) No conclusion can be drawn

(B) The conclusion drawn is particular

(C) The conclusion drawn is universal

(D) The conclusion drawn is negative

**15.** The immediate inference in which there is transposition of terms is called

(A) Syllogism (B) Conversion

(C) Obversion (D) Induction

**16.** Consider given Assertion (A) and Reason (R) and choose the correct option as given below :

**Assertion (A)** : The temporal process is an actual process.

**Reason (R)** : Reality manifests itself in and through by means of temporal changes.

(A) Both (A) and (R) are true

(B) Both (A) and (R) are false

(C) (A) is true and (R) is not correct explanation of (A)

(D) (A) is not true and (R) is its proper explanation

**17.** The transcendental consciousness according to Husserl intends the word of

(A) Transcendental subjectivity

(B) Transcendental unity of apperception

(C) Ideal essences

(D) Ideal intentions

**18.** Sophists did not propose

(A) The individual is a law unto himself in matters of knowledge

(B) Two opposite statements may be true

(C) Man is the measure of all things

(D) Knowledge is virtue

**19.** According to Advaita Vedas are

(A) Paurusheya

(B) Apaurusheya

(C) Paurusheya and Apaurusheya

(D) Neither Paurusheya nor Apaurusheya

**20.** "Aum" is the symbol of

(A) Concreteness

(B) Completeness

(C) Brahma, Vishnu, Maheswara

(D) Neti Neti

**21.** Knowledge is true belief plus a logos is the view of

(A) Socrates (B) Plato

(C) Aristotle (D) Thales

**22.** ಇಂದ್ರೀಯ ಸಂವೇದನೆಗಳನ್ನು ಹೊರತುಪಡಿಸಿ ಜ್ಞಾನದಲ್ಲಿ ಮೊದಲು ಬಂದಿರುವುದು ಯಾವುದೂ ಇಲ್ಲ

(A) ಅನುಭವವಾದ

(B) ವಿಚಾರವಾದ

(C) ಸಂಬಂಧವಾದ

(D) ವಿಶ್ವಸನೀಯವಾದ

**23.** ಕಚಿತ ಜ್ಞಾನ ಸಿದ್ಧಾಂತದ ಪ್ರವರ್ತಕ

(A) ಜೆಟ್ಟಿಯರ್

(B) ಲೆಬ್ನಿಜ್

(C) ಪ್ಲೇಟೋ

(D) ಸೈಂಟ್ ಥಾಮಸ್

**24.** 20ನೇ ಶತಮಾನದಲ್ಲಿ ರೂಪಾತ್ಮಕ ದೃಢೀಕರಣ ಸಿದ್ಧಾಂತವನ್ನು ಪೂರ್ಣರೂಪದಲ್ಲಿ ನೀಡಿದವರು

(A) ಪ್ಲೇಟೋ

(B) ಲಾಕ್

(C) ತಾರ್ಕಿಕ ಪ್ರತ್ಯಕ್ಷ ಪ್ರಮಾಣವಾದಿಗಳು

(D) ಕ್ಯಾಂಟ್

**25.** ದೃಢೀಕರಣ ಸಿದ್ಧಾಂತದ ಪ್ರಮುಖ ಬೆಳವಣಿಗೆಗಳು ___________ ರ ಕೊಡುಗೆಯ ಫಲವಾಗಿತ್ತು.

(A) ಬ್ರಾಡ್ಲೆ (B) ಕಾರ್ನಾಪ್

(C) ಆಸ್ಟಿನ್ (D) ಕ್ಯಾಂಟ್

**26.** ಸಂಭಾವ್ಯತೆಯನ್ನು ಕುರಿತ ಪರಿಧಿ ಸಿದ್ಧಾಂತದ ಮೂಲವನ್ನು ನಾವು ___________ನಲ್ಲಿ ಗುರುತಿಸಬಹುದು.

(A) ಲ್ಯಾಪ್ಲಾಸ್ (B) ರಸ್ಸೆಲ್

(C) ಜಿ. ಇ. ಮೂರ್ (D) ಕೇನ್ಸ್

**27.** ಸಮಕಾಲೀನ ಸ್ತ್ರೀವಾದಿ ನೀತಿಶಾಸ್ತ್ರವು _________ಗೆ ಸಂವೇದನಾಶೀಲವಾಗಿದೆ.

(A) ಲಿಂಗ ತಾರತಮ್ಯ

(B) ಜೀವಪರಿಸರಶಾಸ್ತ್ರ

(C) ನ್ಯಾಯ

(D) ಜ್ಞಾನ ಮೀಮಾಂಸೆ

**28.** ಕಳಕಳಿಯನ್ನು ಕುರಿತ ಸ್ತ್ರೀವಾದಿ ನೀತಿಶಾಸ್ತ್ರವು _________________ರ ಬರಹಗಳಲ್ಲಿ ಪ್ರಮುಖ ಪರಿಕಲ್ಪನೆಯಾಗಿ ಕಂಡುಬರುತ್ತದೆ.

(A) ವಂದನಾ ಶಿವ

(B) ಕೆರೋಲ್ ಗಿಲಿಗ್ಯಾನ್

(C) ಫ್ರಾಯ್ಡ್

(D) ಯುಂಗ್

**29.** ''ಜಾತೀಯ ಅನುವಂಶೀಯತೆಯು ನಮ್ಮ ವ್ಯಕ್ತಿತ್ವದ ಬೆಳವಣಿಗೆಯ ಮೇಲೆ ಪ್ರಭಾವ ಬೀರುವುದಷ್ಟೇ ಅಲ್ಲ ನಮ್ಮ ವ್ಯಕ್ತಿತ್ವವನ್ನು ಕುಂಠಿತಗೊಳಿಸುತ್ತದೆ ''. ಈ ನಿಲುವನ್ನು___________ ಎಂದು ಕರೆಯುತ್ತಾರೆ.

(A) ವಿಶ್ವಸನೀಯವಾದ

(B) ಸಹಜೀಕೃತ ಜ್ಞಾನಮೀಮಾಂಸೆ

(C) ಜೈವಿಕ ನಿಯತವಾದ

(D) ಸಾರಸತ್ವವಾದ

**30.** ಕ್ಯಾಂಟ್ ಪ್ರಕಾರ ''ಆಗಿರಬೇಕು'' ಎಂಬ ಪರಿಕಲ್ಪನೆಯು ___________ಗೆ ಅನ್ವಯಿಸುತ್ತದೆ.

(A) ಪ್ರಾಣಿಗಳು

(B) ಪೂರ್ಣ ವೈಚಾರಿಕ ಪ್ರಾಣಿಗಳು

(C) ಒಂದು ಪವಿತ್ರ ಇಚ್ಛೆಯಾಗಿದೆ

(D) ವಿಚಾರಶೀಲನಾಗಿದ್ದೂ ಒಲವು ಸಂಸ್ಕಾರಗಳನ್ನು ಹೊಂದಿರುವ ಮನುಷ್ಯನಿಗೆ

**22.** There is 'nothing in the intellect that was not previously in the senses' relates to

(A) Empiricism

(B) Rationalism

(C) Relativism

(D) Reliabilism

**23.** The grandfather of confirmation theory of knowledge is

(A) Gettier

(B) Leibnitz

(C) Plato

(D) St. Thomas

**24.** In the 20$^{th}$ century a fully formal confirmation theory was provided by

(A) Plato

(B) Locke

(C) The Logical Positivists

(D) Kant

**25.** The principal developments on confirmation theory were due to the contributions of

(A) Bradley (B) Carnap

(C) Austin (D) Kant

**26.** The range theory of probability owes its origin to

(A) Laplace (B) Russell

(C) G. E. Moore (D) Keynes

**27.** Contemporary feminist ethics is sensitive to

(A) Gender bias

(B) Ecology

(C) Justice

(D) Epistemology

**28.** The feminist ethics of care was the key notion in the writings of

(A) Vandana Siva

(B) Carol Gilligan

(C) Freud

(D) Yung

**29.** The view that our generic inheritance not only influences but constrains our development as persons is known as

(A) Reliabilism

(B) Naturalised epistemology

(C) Biological determinism

(D) Essentialism

**30.** For Kant, the notion of "ought" is applicable to

(A) Animals

(B) Fully rational creatures

(C) A holywill

(D) Man who is rational and yet has inclinations

**31.** ಹೊಂದಿಸಿ ಬರೆಯಿರಿ :

a. ಸದ್ಗುಣಗಳು — i. ಪರಜನರೊಂದಿಗೆ ವ್ಯವಹರಿಸಬೇಕಾದಾಗ ವ್ಯಕ್ತಿಯು ಪಾಲಿಸಬೇಕಾದುದು

b. ಪ್ರಮುಖ ಸದ್ಗುಣಗಳು — ii. ಉದ್ದೇಶಪೂರ್ವಕ ಆಯ್ಕೆಯ ಅಭ್ಯಾಸ

c. ನ್ಯಾಯ — iii. ವ್ಯಕ್ತಿಯ ಜೀವನದ ಮೇಲೆ ನೇರವಾಗಿ ಪರಿಣಾಮ ಬೀರುವಂತಹುದು

d. ಧೈರ್ಯ ಮತ್ತು ಸಂಯಮ — iv. ಇತರರು ಅವಲಂಬಿಸುವಂತಹವು

**ಸಂಕೇತಗಳು :**

| | a | b | c | d |
|---|---|---|---|---|
| (A) | ii | iv | i | iii |
| (B) | iv | i | ii | iii |
| (C) | i | ii | iii | iv |
| (D) | ii | i | iv | iii |

**32.** ''ತಪ್ಪು ಮಾಡುವ ಅಂತರಾತ್ಮವು ಒಂದು ಅಸಂಭವ ಕಲ್ಪನೆ''. ಈ ಹೇಳಿಕೆಯನ್ನು ನೀಡಿದವರು

(A) ಎಫ್. ಎಚ್. ಬ್ರಾಡ್ಲೆ

(B) ಬಿಷಪ್ ಬಟ್ಲರ್

(C) ಕ್ಯಾಂಟ್

(D) ರಾಲ್ಸ್

**33.** ''ಅದಕ್ಕೆ ವ್ಯಕ್ತವಾದ ಶಕ್ತಿ ಮತ್ತು ಅಧಿಕಾರಗಳಿರುತ್ತಿದ್ದಲ್ಲಿ'' ಅದು ಇಡೀ ವಿಶ್ವವನ್ನು ಪೂರ್ಣವಾಗಿ ತನ್ನ ನಿಯಂತ್ರಣದಲ್ಲಿ ಇರಿಸಿಕೊಳ್ಳುತ್ತಿತ್ತು''. ಈ ಹೇಳಿಕೆಯನ್ನು ನೀಡಿದವರು

(A) ಮಾರ್ಟಿನೊ

(B) ಶಾಫ್ಟ್ಸ್‌ಬರಿ

(C) ಬಟ್ಲರ್

(D) ಪ್ಲೇಟೋ

**34.** ''ಒಳ್ಳೆಯ ಇಚ್ಛೆಯನ್ನು ಬಿಟ್ಟು ಒಳ್ಳೆಯದೆಂಬುದು ಏನೂ ಇಲ್ಲ'' ಈ ಹೇಳಿಕೆಯು ________ಗೆ ಅನ್ವಯಿಸುತ್ತದೆ.

(A) ನೀತಿಶಾಸ್ತ್ರದ ಅಂಶಗಳು

(B) ಪ್ರತಿಭಾವನಾತ್ಮಕ ಸಿದ್ಧಾಂತ

(C) ನೈಸರ್ಗಿಕ ಮತ್ತು ನೈತಿಕ ವ್ಯವಸ್ಥೆ

(D) ನೈತಿಕ ಪ್ರಜ್ಞೆಯನ್ನು ಕುರಿತು ಕ್ಯಾಂಟನ ನಿಲುವು

**35.** __________ ಅನ್ನು ಆಧರಿಸಿ ಅನ್ವಯ-ವ್ಯತಿರೇಕ ವಿಧಾನದ ಮೂಲಕ ವ್ಯಾಪ್ತಿಯನ್ನು ತಿಳಿಯಲಾಗುತ್ತದೆ.

(A) ಪುನರಾವಲೋಕನ

(B) ಅವಲೋಕನ

(C) ಸೋಪಾಧಿತವಾದ ತರ್ಕ

(D) ಪುನರಾವಲೋಕನ ಮತ್ತು ಸೋಪಾಧಿತ ತರ್ಕ

**36.** ಅನುಮಾನದ ಎಲ್ಲಾ ತರ್ಕಾಭಾಸಗಳೂ ಮಧ್ಯಮ ಪದವನ್ನು ಕುರಿತ ಆಭಾಸಗಳಾಗಿವೆ. ಈ ದೋಷಪೂರಿತ ಮಧ್ಯಮ ಪದವು ____________ದ ಅಸ್ತಿತ್ವವನ್ನು ಸಮರ್ಥಿಸಲಾರದು.

(A) ಸಾಧ್ಯ

(B) ಪಕ್ಷ

(C) ಪಕ್ಷದಲ್ಲಿ ಸಾಧ್ಯ

(D) ಸಾಧ್ಯದಲ್ಲಿ ಪಕ್ಷ

**31.** Match the following :

| | |
|---|---|
| a. Virtues | i. That relate to the individuals dealing with his fellow mens |
| b. Cardinal virtues | ii. Are habits of deliberate choice |
| c. Justice | iii. That bear most directly on the life of the individual |
| d. Courage and temperance | iv. Are those on which others depend |

**Codes :**

| | a | b | c | d |
|---|---|---|---|---|
| (A) | ii | iv | i | iii |
| (B) | iv | i | ii | iii |
| (C) | i | ii | iii | iv |
| (D) | ii | i | iv | iii |

**32.** The statement "an erring conscience is a chimera" is attributed to

(A) F. H. Bradley

(B) Bishop Butler

(C) Kant

(D) Rawls

**33.** "If it had power, as it has manifest authority, it would absolutely govern the world". This statement is made by

(A) Martineau

(B) Shaftesbury

(C) Butler

(D) Plato

**34.** "There is nothing good but the good will" refers to

(A) Elements of ethics

(B) Intuitionist doctrine

(C) Relation between natural and moral order

(D) Kant's view of the moral reason

**35.** Vyapti is known by the joint method of agreement in presence and agreement in absence based on

(A) Repeated observation

(B) Observation

(C) Hypothetical reasoning

(D) Repeated observation aided by hypothetical reasoning

**36.** All fallacious of inference are due to fallacies of middle term, which cannot prove the existence of

(A) Predicate

(B) Subject

(C) Predicate in the subject

(D) Subject in the predicate

**37.** ನ್ಯಾಯದರ್ಶನದ ಹೇತ್ವಾಭಾಸಕ್ಕೆ ಸಂಬಂಧಿಸಿದಂತೆ ಹೊಂದಿಸಿ ಬರೆಯಿರಿ :

| | | | |
|---|---|---|---|
| a. | ಸವ್ಯಭಿಚಾರ | i. | ಅನುಮಾನೇತರ ಪ್ರಮಾಣದಿಂದ ವಿರೋಧಿಸಲ್ಪಟ್ಟ ಮಧ್ಯಮ |
| b. | ವಿರುದ್ಧ | ii. | ಸಮರ್ಥಿಸಲಾಗದ ಮಧ್ಯಮ |
| c. | ಸಾಧ್ಯಸಮ | iii. | ವಿರೋಧಿಸಲ್ಪಟ್ಟ ಮಧ್ಯಮ |
| d. | ಬಾಧಿಕ | iv. | ಅನಿಯತ ಮಧ್ಯಮ |

**ಸಂಕೇತಗಳು :**

| | a | b | c | d |
|---|---|---|---|---|
| (A) | iv | iii | ii | i |
| (B) | iii | ii | i | iv |
| (C) | ii | i | iv | iii |
| (D) | i | iv | iii | ii |

**38.** ಹೊಂದಿಸಿ ಬರೆಯಿರಿ :

| | | | |
|---|---|---|---|
| a. | ಶ್ರೋತ್ರ | i. | ಗಂಧ |
| b. | ತ್ವಕ್ | ii. | ನೋಟ |
| c. | ಚಕ್ಷುಸ್ | iii. | ಸ್ಪರ್ಶ |
| d. | ಘ್ರಾಣ | iv. | ಶ್ರವಣ |

**ಸಂಕೇತಗಳು :**

| | a | b | c | d |
|---|---|---|---|---|
| (A) | iv | iii | ii | i |
| (B) | iii | ii | i | iv |
| (C) | ii | i | iv | iii |
| (D) | i | iv | iii | ii |

**39.** ಹೊಂದಿಸಿ ಬರೆಯಿರಿ :

| | | | |
|---|---|---|---|
| a. | ಪ್ರಮಾತೃ | i. | ನೈಜ ಲಕ್ಷಣ |
| b. | ಪ್ರಮೇಯ | ii. | ಗ್ರಹಿಕೆ |
| c. | ಪ್ರಮಿತಿ | iii. | ಜ್ಞೇಯ |
| d. | ಯಥಾರ್ಥ | iv. | ಜ್ಞಾತೃ |

**ಸಂಕೇತಗಳು :**

| | a | b | c | d |
|---|---|---|---|---|
| (A) | iv | iii | ii | i |
| (B) | iii | ii | i | iv |
| (C) | ii | i | iv | iii |
| (D) | i | iv | iii | ii |

**40.** '' 'ಒಳಿತು' ಎಂಬ ಪದಕ್ಕೆ ವ್ಯಾಖ್ಯೆಯನ್ನು ನೀಡುವ ಯಾವುದೇ ಪ್ರಯತ್ನವು ಪ್ರಕೃತಿವಾದೀ ದೋಷಕ್ಕೆ ಎಡೆಮಾಡಿಕೊಡುತ್ತದೆ''. ಇದು ________ನ ನಿಲುವು.

(A) ಮೂರ್

(B) ರಸ್ಸೆಲ್

(C) ವಿಟ್‌ಗೈನ್‌ಸ್ಟೀನ್

(D) ಹುಸೆರಲ್

**41.** ರಸ್ಸೆಲ್ ''ಪ್ರತ್ಯಕ್ಷದ ಮೂಲಕ ಅರಿವು'' ಮತ್ತು ''ವಿವರಣೆಯ ಮೂಲಕ ಅರಿವು'' ಎಂದು ವಿಂಗಡಿಸಿದನು. ಆತನ ಪ್ರಕಾರ ದೋಷವು __________ ಹಂತದಲ್ಲಿ ಉಂಟಾಗುತ್ತದೆ.

(A) ಪ್ರತ್ಯಕ್ಷ

(B) ವಿವರಣೆ

(C) ಪ್ರತ್ಯಕ್ಷ ಮತ್ತು ವಿವರಣೆ

(D) ಅರಿವು

**37.** With regard to Hetvabhasas of Nyaya match the following :

| | |
|---|---|
| a. Savyabhichara | i. Non-inferentially contradicted middle |
| b. Viruddha | ii. Unproved middle |
| c. Sadhyasama | iii. Contradictory middle |
| d. Badhika | iv. Irregular middle |

**Codes :**

| | **a** | **b** | **c** | **d** |
|---|---|---|---|---|
| (A) | iv | iii | ii | i |
| (B) | iii | ii | i | iv |
| (C) | ii | i | iv | iii |
| (D) | i | iv | iii | ii |

**38.** Match the following :

| | |
|---|---|
| a. Shrotra | i. Smell |
| b. Tvak | ii. Sight |
| c. Chakshus | iii. Touch |
| d. Ghrana | iv. Hearing |

**Codes :**

| | **a** | **b** | **c** | **d** |
|---|---|---|---|---|
| (A) | iv | iii | ii | i |
| (B) | iii | ii | i | iv |
| (C) | ii | i | iv | iii |
| (D) | i | iv | iii | ii |

**39.** Match the following :

| | |
|---|---|
| a. Pramatr | i. Real character |
| b. Prameya | ii. Apprehension |
| c. Pramiti | iii. Object of knowledge |
| d. Yathartha | iv. Knowing self |

**Codes :**

| | **a** | **b** | **c** | **d** |
|---|---|---|---|---|
| (A) | iv | iii | ii | i |
| (B) | iii | ii | i | iv |
| (C) | ii | i | iv | iii |
| (D) | i | iv | iii | ii |

**40.** "Any attempt to define 'good' amounts to committing naturalistic fallacy". This is the view of

(A) Moore

(B) Russell

(C) Wittgenstein

(D) Husserl

**41.** Russell distinguished between knowledge by acquaintance and knowledge by description. According to him, the possibility of committing error is at the stage of

(A) Acquaintance

(B) Description

(C) Both Acquaintance and description

(D) Knowledge

**42.** ''ಹಳದಿ ಬಣ್ಣವು ಚಿನ್ನದಲ್ಲಿ ಇಲ್ಲ. ಅದು ನಮ್ಮಲ್ಲಿ ಆಲೋಚನೆಯನ್ನು ಸೃಷ್ಟಿಸಬಲ್ಲ ಚಿನ್ನದಲ್ಲಿರುವ ಒಂದು ಶಕ್ತಿಯಷ್ಟೆ''. ಇದು ಯಾರ ನಿಲುವು ?

(A) ಸ್ಪಿನೋಜ಼ಾ (B) ಲಾಕ್

(C) ಹ್ಯೂಮ್ (D) ಡೆಕಾರ್ಟ್

**43.** ಹ್ಯೂಮ್ ಪ್ರಕಾರ ಕಾರ್ಯಕಾರಣ ಸಂಬಂಧವನ್ನು ಕುರಿತ ಹೇಳಿಕೆಯು

(A) ವಿಶ್ಲೇಷಣಾತ್ಮಕ ಹೇಳಿಕೆ ಆಗಿದೆ

(B) ಸಂಶ್ಲೇಷಣಾತ್ಮಕ ಹೇಳಿಕೆ ಆಗಿದೆ

(C) ವಿಶ್ಲೇಷಣಾತ್ಮಕ ಮತ್ತು ಸಂಶ್ಲೇಷಣಾತ್ಮಕ ಹೇಳಿಕೆಗಳೆರಡೂ ಆಗಿದೆ

(D) ವಿಶ್ಲೇಷಣಾತ್ಮಕವೂ ಅಲ್ಲ ಸಂಶ್ಲೇಷಣಾತ್ಮಕವೂ ಅಲ್ಲ

**44.** ಪರಿಣಾಮ ಪರಿಕಲ್ಪನೆಯನ್ನು ಕುರಿತು ಹೆರಾಕ್ಲೈಟಸ್ ಕೆಳಕಂಡಂತೆ ಹೇಳಿದ

(A) ನೀವು ಎರಡೂ ನದಿಗಳಲ್ಲಿ ಸ್ನಾನ ಮಾಡಲು ಸಾಧ್ಯವಿಲ್ಲ

(B) ನೀವು ಒಂದೇ ನದಿಯಲ್ಲಿ ಎರಡು ಬಾರಿ ಸ್ನಾನ ಮಾಡಲು ಸಾಧ್ಯವಿಲ್ಲ

(C) ಎರಡು ನದಿಗಳಲ್ಲಿ ನೀವು ಒಮ್ಮೆ ಮಾತ್ರ ಸ್ನಾನ ಮಾಡಬಹುದು

(D) ನೀವು ಸ್ನಾನ ಮಾಡಲು ಸಾಧ್ಯವೇ ಇಲ್ಲ

**45.** ___________ ಎಂಬುದು ಒಂದು ವರ್ಗಕ್ಕೆ ಸೇರಿದ ಅನೇಕ ವಿವಿಧ ವಸ್ತುಗಳಲ್ಲಿರುವ ಒಂದು ಸಮಾನ ಗುಣ.

(A) ದ್ರವ್ಯ

(B) ಪರ್ಯಾಯ

(C) ಸಾರ್ವತ್ರಿಕ

(D) ಗುಣ

**46.** ಸದ್ಗುಣಗಳು ___________ನ ಅಭ್ಯಾಸ.

(A) ಆಯ್ಕೆ

(B) ಅನಿಚ್ಛಾಪೂರ್ವಕ ಆಯ್ಕೆ

(C) ಉದ್ದೇಶಪೂರ್ವಕ ಆಯ್ಕೆ

(D) ಒತ್ತಾಯಪೂರ್ವಕ ಆಯ್ಕೆ

**47.** ______________ ಅನ್ನು ಒಳಗೊಂಡಿದೆಯೆಂದು ಸಾರಿದಾಗ ನ್ಯಾಯ ಪರಿಕಲ್ಪನೆ ವಿಶಾಲ ಅರ್ಥವ್ಯಾಪ್ತಿಯನ್ನು ಪಡೆಯುತ್ತದೆ.

(A) ಎಲ್ಲಾ ವೈಯಕ್ತಿಕ ಸದ್ಗುಣಗಳು

(B) ಎಲ್ಲಾ ಧಾರ್ಮಿಕ ಸದ್ಗುಣಗಳು

(C) ಎಲ್ಲಾ ರಾಜಕೀಯ ಸದ್ಗುಣಗಳು

(D) ಎಲ್ಲಾ ಸಾಮಾಜಿಕ ಸದ್ಗುಣಗಳು

**48.** ''ಕುರಿಯನ್ನು ಕದ್ದೆಯೆಂಬ ಕಾರಣಕ್ಕೆ ನೀನು ಶಿಕ್ಷಾರ್ಹನಲ್ಲ, ಬದಲಾಗಿ ಕುರಿಯನ್ನು ಕದಿಯಬಾರದೆಂಬ ಕಾರಣಕ್ಕೆ ಶಿಕ್ಷಾರ್ಹ''. ಈ ಹೇಳಿಕೆಯು ________________ ಶಿಕ್ಷಾವಾದಕ್ಕೆ ಉದಾಹರಣೆ.

(A) ಶಿಕ್ಷಣಾತ್ಮಕ

(B) ಪ್ರತಿಬಂಧಕ

(C) ಸುಧಾರಣಾತ್ಮಕ

(D) ಪ್ರತಿಫಲ

**49.** ಅಪರಾಧಿಗೆ ಶಿಕ್ಷಣವನ್ನು ನೀಡುವ ಉದ್ದೇಶವನ್ನು ಹೊಂದಿರುವ ಶಿಕ್ಷಾವಾದವನ್ನು________________ ಎಂದು ಕರೆಯುತ್ತಾರೆ.

(A) ಪ್ರತಿಬಂಧಕವಾದ

(B) ಪ್ರತಿವೈರವಾದ

(C) ಸುಧಾರಣಾತ್ಮಕವಾದ

(D) ಪ್ರತಿಫಲವಾದ

**42.** According to whom "yellowness is not actually in gold but a power in gold to produce that idea in us"

(A) Spinoza (B) Locke

(C) Hume (D) Descartes

**43.** A causal judgement according to Hume is

(A) An analytical judgement

(B) Synthetic judgement

(C) Both analytic and synthetic

(D) Neither analytic nor synthetic

**44.** As regards to the concept of becoming Heraclitus made the following statement

(A) You cannot bathe in two rivers

(B) You cannot bathe twice in the same river

(C) You can bathe only once in two rivers

(D) You cannot take bathe at all

**45.** ________ is a common property that is present in a number of different particular things of the same class.

(A) Substance

(B) Mode

(C) Universal

(D) Attribute

**46.** The virtues are habits of

(A) Choice

(B) Involuntary choice

(C) Deliberate choice

(D) Compulsory choice

**47.** Justice seems to be made some what too comprehensive in its meaning when it is used to include

(A) All individual virtues

(B) All religions virtues

(C) All political virtues

(D) All social virtues

**48.** "You are not punished for stealing sheep, but in order that sheep may not be stolen" is an example of __________ theory of punishment.

(A) The educative

(B) Preventive

(C) Reformative

(D) Retributive

**49.** The aim of punishment that is to educate the offender himself is known as

(A) Preventive theory of punishment

(B) Vindictive theory of punishment

(C) Reformative theory of punishment

(D) Retributive theory of punishment

**50.** ಅಪರಾಧದ ಅರಿವನ್ನು ಅಪರಾಧಿಗೇ ತಲುಪಿಸುವ ಗುರಿಯನ್ನು ಕೆಳಗಿನವುಗಳಲ್ಲಿ ಯಾವ ಸಿದ್ಧಾಂತವು ಹೊಂದಿದೆ ?

(A) ಪ್ರತಿಫಲವಾದ

(B) ಶಿಕ್ಷಣಾತ್ಮಕವಾದ

(C) ಪ್ರತಿಬಂಧಕವಾದ

(D) ಸುಧಾರಣಾತ್ಮಕವಾದ

**51.** ಇಂದ್ರೀಯ ಮತ್ತು ಇಂದ್ರೀಯ ವಿಷಯದ ಸಂಪರ್ಕವು ___________ಗೆ ವಿಶೇಷ ಕಾರಣ.

(A) ಅರ್ಥಾಪಲ್ತಿ

(B) ಅನುಮಾನ

(C) ಉಪಮಾನ

(D) ಪ್ರತ್ಯಕ್ಷ

**52.** ನ್ಯಾಯದ ಪ್ರಕಾರ ನಿರ್ವಿಕಲ್ಪಕ ಪ್ರತ್ಯಕ್ಷವು

(A) ವಿವರಿಸಲು ಅಸಾಧ್ಯವಾಗಿರುವಂತಹುದು

(B) ಹೆಸರಿಸಲು ಅಸಾಧ್ಯವಾಗಿರುವಂತಹುದು

(C) ವಿವರಿಸಲು ಅಸಾಧ್ಯ ಮತ್ತು ಹೆಸರಿಸಲು ಅಸಾಧ್ಯ

(D) ವಿವರಿಸಲು ಮತ್ತು ಹೆಸರಿಸಲು ಅಸಾಧ್ಯವೆನ್ನಲಾಗುವುದಿಲ್ಲ

**53.** ನ್ಯಾಯದ ಪ್ರಕಾರ ಸವಿಕಲ್ಪಕ ಪ್ರತ್ಯಕ್ಷವು __________ ಅನ್ನು ಒಳಗೊಂಡಿರುವ ಪ್ರತ್ಯಕ್ಷದ ಒಂದು ಹಂತ.

(A) ವಸ್ತುವೊಂದರ ನೆನಪು

(B) ಪ್ರತ್ಯಭಿಜ್ಞಾ

(C) ವಸ್ತುವೇ ಇಲ್ಲದ ಗ್ರಹಿಕೆ

(D) ನಿರ್ದಿಷ್ಟ ಗುಣಗಳನ್ನು ಹೊಂದಿರುವಂತೆ ವಸ್ತುವಿನ ಗ್ರಹಿಕೆ

**54.** ಯಾರ ಪ್ರಕಾರ ''ಪ್ರತ್ಯಕ್ಷವು ನಿರ್ದಿಷ್ಟ ವಸ್ತುವನ್ನು ಕುರಿತ ಗ್ರಹಿಕೆ ಅದು ದೋಷಮುಕ್ತವಾಗಿದ್ದು ಅದರಲ್ಲಿ ಯಾವ ಕಲ್ಪನೆಗಳೂ ಇರುವುದಿಲ್ಲ'' ?

(A) ನ್ಯಾಯ (B) ವೈಶೇಷಿಕ

(C) ಬೌದ್ಧ (D) ವೇದಾಂತಿ

**55.** ''ಯಾವುದು ದೃಶ್ಯವೋ ಅದು ನಾಮಕ್ಕೆ ಸಂಬಂಧಿಸಿದ್ದಲ್ಲ, ಯಾವುದು ನಾಮಕ್ಕೆ(ಹೆಸರು) ಸಂಬಂಧಿಸಿದೆಯೋ ಅದು ದೃಶ್ಯವಲ್ಲ'' . ಈ ನಿಲುವು ________ ಗೆ ಉದಾಹರಣೆ.

(A) ಸವಿಕಲ್ಪಕ

(B) ನಿರ್ವಿಕಲ್ಪಕ ಪ್ರತ್ಯಕ್ಷ

(C) ಸವಿಕಲ್ಪಕ ಮತ್ತು ನಿರ್ವಿಕಲ್ಪಕ ಪ್ರತ್ಯಕ್ಷಗಳೆರಡೂ

(D) ಸವಿಕಲ್ಪಕವೂ ಅಲ್ಲ ನಿರ್ವಿಕಲ್ಪಕವೂ ಅಲ್ಲ

**56.** ''ಭ್ರಮೆಯ ವಸ್ತುವು ಅದನ್ನು ನಾವು ನೋಡುತ್ತಿರುವವರೆಗೂ ಇರುತ್ತದೆ. ಮತ್ತೊಂದು ವಸ್ತುವಿನ ಜ್ಞಾನದಿಂದ ಬಾಧವಾದಾಗ ಅದು ನಾಶವಾಗುತ್ತದೆ''. ಇದು ___________ದ ನಿಲುವು.

(A) ನ್ಯಾಯ

(B) ಮೀಮಾಂಸಾ

(C) ಅದ್ವೈತ ವೇದಾಂತ

(D) ಬೌದ್ಧ ಧರ್ಮ

**57.** ಲಿಂಗ ಮತ್ತು ಸಾಧ್ಯಗಳಿಗಿರುವ ವ್ಯಾಪ್ತಿ ಸಂಬಂಧದ ಜ್ಞಾನದ ಮೂಲಕ ಪಡೆದುಕೊಳ್ಳುವ ಪರೋಕ್ಷ ಜ್ಞಾನವನ್ನು ___________ ಎಂದು ಕರೆಯುತ್ತಾರೆ.

(A) ಪ್ರತ್ಯಕ್ಷ

(B) ಅನುಮಾನ

(C) ಉಪಮಾನ

(D) ಶಬ್ದ

**50.** Which one of the following is the view that 'the aim of punishment into allow a man's deed to return on his ownhead' ?

(A) Retributive theory

(B) Educative theory

(C) Preventive theory

(D) Reformative theory

**51.** The contact between sense organ and an object is a special cause of

(A) Arthapalti

(B) Anumana

(C) Upamana

(D) Pratyaksa

**52.** Indeterminate perception, according to Nyaya, is

(A) Undefinable

(B) Nameless

(C) Both undefinable and nameless

(D) Neither undefinable nor nameless

**53.** Determinate perception, according to Nyaya, is a logical stage of perception which involves ?

(A) Memory of the object

(B) Recognition of the object (pratyabhijna)

(C) Cognition of no object

(D) Cognition of the object as possessing some character

**54.** According to whom that "perception is the apprehension of a specific individual, which is non erroneons and free from conceptual contracts" ?

(A) Nyaya (B) Vaisesika

(C) Buddhist (D) Vedantins

**55.** "What is perceived is not related to a name and what is related to a name is not perceived" – is the example of

(A) Determinate perception

(B) Indeterminate perception

(C) Both determinate and indeterminate perception

(D) Neither determinate nor indeterminate perception

**56.** "The object of the illusion is described as existent so long as we see it and as non-existent when it is contradicted by a sublating cognition" – is the example of the view of

(A) Nyaya

(B) Mimamsa

(C) Advaita vedanta

(D) Buddhism

**57.** The knowledge derived through the medium of the knowledge of invariable concommittance between middle term and major term is called

(A) Perception

(B) Inference

(C) Analogy

(D) Verbal testimony

**58.** ಇತರರಿಗೆ ಔಪಾಚಾರಿಕ ಸಮರ್ಥನೆಯ ಅಗತ್ಯವಿರದ ಕೇವಲ ವ್ಯಕ್ತಿಯ ಮನಸ್ಸಿಗೆ ಮಾತ್ರ ಸೀಮಿತವಾಗಿರುವ ಅನುಮಾನಕ್ಕೆ __________ ಎಂದು ಹೆಸರು.

(A) ಸ್ವಾರ್ಥಾನುಮಾನ

(B) ಪರಾರ್ಥಾನುಮಾನ

(C) ಅನ್ವಯ

(D) ವ್ಯತಿರೇಕ

**59.** ನ್ಯಾಯದ ಪರಾರ್ಥಾನುಮಾನವನ್ನು __________ನ ಅನುಮಾನಕ್ಕೆ ಹೋಲಿಸಬಹುದು.

(A) ಅದ್ವೈತ

(B) ವೈಶೇಷಿಕ

(C) ಅರಿಸ್ಟಾಟಲ್

(D) ಸಾಕ್ರೆಟೀಸ್

**60.** ನೈಯಾಯಿಕ ಅನುಮಾನದ ತಾರ್ಕಿಕ ಬುನಾದಿಯೆಂದರೆ

(A) ಸಮವಾಯ

(B) ವ್ಯಾಪ್ತಿ

(C) ಅಪೃಥಕ್ ಸಿದ್ಧಿ

(D) ಸಂಯೋಗ

**61.** ಎಲ್ಲವೂ ಸತ್ಯ ಮತ್ತು ಯಾವುದೂ ಅಸತ್ಯವಲ್ಲವೆಂಬುದು __________ ಕ್ಷೇತ್ರಕ್ಕೆ ಸೇರುತ್ತದೆ.

(A) ಆಗುವಿಕೆ

(B) ಶೂನ್ಯ

(C) ಇಲ್ಲದಿರುವಿಕೆ

(D) ಇರುವಿಕೆ

**62.** ಹೊಂದಿಸಿ ಬರೆಯಿರಿ :

| | |
|---|---|
| a. ಪೃಥ್ವಿ | i. ರಸ |
| b. ಜಲ | ii. ಗಂಧ |
| c. ವಾಯು | iii. ಸ್ಪರ್ಶ |
| d. ಆಕಾಶ | iv. ಶಬ್ದ |

**ಸಂಕೇತಗಳು :**

| | a | b | c | d |
|---|---|---|---|---|
| (A) | ii | i | iii | iv |
| (B) | i | iii | iv | ii |
| (C) | iii | iv | ii | i |
| (D) | iv | ii | i | iii |

**63.** ಕೆಳಗಿನವುಗಳಲ್ಲಿ ವೈದಿಕ ನೀತಿಶಾಸ್ತ್ರವು ಯಾವುದನ್ನು ಅಂತಿಮ ಒಳಿತೆಂದು ಒಪ್ಪಿಕೊಳ್ಳುತ್ತದೆ ?

(A) ದಾನ

(B) ಯಜ್ಞ

(C) ಅಹಿಂಸಾ

(D) ಕ್ಷಮಾಶೀಲತಾ

**64.** ಕರ್ಮ ನಿಯಮವೆಂದರೆ __________ ಎಂದರ್ಥ.

(A) ಒಬ್ಬನು ಹೊಣೆಗೇಡಿ

(B) ಒಬ್ಬನು ತಾನು ಮಾಡಿದ ಕೆಲಸಕ್ಕೆ ಹೊಣೆಯಲ್ಲ

(C) ಒಬ್ಬನು ಇತರರು ಮಾಡಿದ ಕೆಲಸಕ್ಕೆ ಹೊಣೆ

(D) ಒಬ್ಬನು ತಾನು ಮಾಡಿದ ಕೆಲಸಕ್ಕೆ ತಾನೇ ಹೊಣೆ

**65.** ಸರಿಯಾದ ಕ್ರಮವನ್ನು ಆಯ್ಕೆ ಮಾಡಿ :

(A) ಮೂಲ ಪ್ರಕೃತಿ, ಅಹಂಕಾರ, ಮಹತ್, ಮನಸ್

(B) ಮೂಲ ಪ್ರಕೃತಿ, ಮಹತ್, ಅಹಂಕಾರ, ಮನಸ್

(C) ಮಹತ್, ಅಹಂಕಾರ, ಮನಸ್, ಮೂಲ ಪ್ರಕೃತಿ

(D) ಮನಸ್, ಮೂಲ ಪ್ರಕೃತಿ, ಮಹತ್, ಅಹಂಕಾರ

**58.** The inference which does not require formal conviction to others and which is restricted to the mind of the individual is called

(A) Svarthanumana

(B) Pararthanumana

(C) Anvaya

(D) Vyatireka

**59.** The Nyaya demonstrative inference may be compared with that of the inference of

(A) Advaita

(B) Vaisesika

(C) Aristotle

(D) Socrates

**60.** The logical ground of Naiyayika inference is

(A) Samavaya

(B) Vyapti

(C) Aprithak siddhi

(D) Samyoga

**61.** Everything real and nothing unreal belongs to the domain of

(A) Becoming

(B) Nothing

(C) Not being

(D) Being

**62.** Match the following :

| | |
|---|---|
| a. Earth | i. Taste |
| b. Water | ii. Smell |
| c. Air | iii. Touch |
| d. Ether | iv. Sound |

**Codes :**

| | **a** | **b** | **c** | **d** |
|---|---|---|---|---|
| (A) | ii | i | iii | iv |
| (B) | i | iii | iv | ii |
| (C) | iii | iv | ii | i |
| (D) | iv | ii | i | iii |

**63.** Which one of the following is accepted by vedic ethics as highest good ?

(A) Dana

(B) Yajna

(C) Ahimsa

(D) Kshamasheelata

**64.** The law of karma means

(A) One is irresponsible

(B) One is not responsible for what one does

(C) One is responsible for others do

(D) One is responsible for what one does

**65.** Choose the correct sequence :

(A) Mula Prakriti, Ahamkara, Mahat, Manas

(B) Mula Prakriti, Mahat, Ahamkara, Manas

(C) Mahat, Ahamkara, Manas, Mula Prakriti

(D) Manas, Mula Prakriti, Mahat, Ahamkara

**66. ಹೇಳಿಕೆ (A)** : ಪ್ರಭಾಕರರ ಪ್ರಕಾರ, ಪ್ರತಿಯೊಂದು ಜ್ಞಾನವೂ ಸತ್ಯ ಮತ್ತು ಭ್ರಮೆಯಲ್ಲಿ ಅಸತ್ಯವಾದುದು ಗೋಚರಿಸುವುದಿಲ್ಲ.

**ಕಾರಣ (R)** : ನೆನಪನ್ನು ಕಳೆದುಕೊಳ್ಳುವುದರಿಂದ ಭ್ರಮೆಯುಂಟಾಗುತ್ತದೆ. ಇಲ್ಲಿ ನಾವು ಪ್ರತ್ಯಕ್ಷಕ್ಕೆ ದತ್ತವಾದ ವಸ್ತುವಿಗೂ ನೆನಪಿನ ವಸ್ತುವಿಗೂ ವ್ಯತ್ಯಾಸವನ್ನು ಗುರುತಿಸುವುದಿಲ್ಲ.

(A) (A) ಮತ್ತು (R) ಗಳೆರಡೂ ನಿಜ. (R), (A)ಗೆ ಸರಿಯಾದ ವಿವರಣೆ

(B) (A) ಮತ್ತು (R) ಗಳೆರಡೂ ನಿಜ. (R), (A)ಗೆ ಸರಿಯಾದ ವಿವರಣೆಯಲ್ಲ

(C) (A) ನಿಜ ಮತ್ತು (R) ಸುಳ್ಳು

(D) (A) ಸುಳ್ಳು ಮತ್ತು (R) ನಿಜ

**67.** ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೊಳ್ಳುತ್ತದೆ?

(A) ''ತೆರೆದ ಪ್ರಶ್ನೆ'' ಎಂಬ ಪ್ರಸಿದ್ಧ ತಂತ್ರದ ಮೂಲಕ ನೈಸರ್ಗಿಕ ನೈತಿಕ ಸಿದ್ಧಾಂತಗಳ ನಿರಾಕರಣೆ – ಸಿಡ್‌ವಿಕ್

(B) ನಿಕೋಮ್ಯಾಕಿಯನ್ ಎಥಿಕ್ಸ್‌ನ 10ನೇ ಪುಸ್ತಕದಲ್ಲಿ ಅರಿಸ್ಟಾಟಲ್ ಅಧ್ಯಯನ ಜೀವನವು ಇದರ ಮೂಲಭೂತ ಸಾಕ್ಷಾತ್ಕಾರವೆಂದು ಶ್ಲಾಘಿಸುತ್ತಾನೆ – ಯೂಡೆಮೋನಿಯಾ

(C) ಒಂದು ವಿಷಯದ ಒಳಿತು ಅಥವಾ ಕೆಡುಕಿನ ಮೌಲ್ಯಮಾಪನವು ನಂಬಿಕೆಯೊಂದನ್ನು ವ್ಯಕ್ತಪಡಿಸುತ್ತದೆ – ನೀತಿಶಾಸ್ತ್ರವನ್ನು ಕುರಿತ ಮನೋಭಾವಾತ್ಮಕ ಸಿದ್ಧಾಂತಗಳು

(D) ನೈತಿಕ ಘೋಷಣೆಗಳ ಸತ್ಯವು ಅವುಗಳನ್ನು ಘೋಷಿಸುವವರ ಬದುಕಿನ ವಿಧಾನಕ್ಕೆ ಸಾಪೇಕ್ಷವಾಗಿರುತ್ತದೆಂಬ ನಿಲುವು – ನೈತಿಕ ವಸ್ತುನಿಷ್ಠವಾದ

**68.** ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೊಳ್ಳುವುದಿಲ್ಲ?

(A) ಒಂದು ಕಾರ್ಯದ ಮೌಲ್ಯವು ಅದರ ಪರಿಣಾಮದ ಮೌಲ್ಯದಿಂದ ಹೊರಹೊಮ್ಮುತ್ತದೆಂಬ ನಿಲುವು – ಪರಿಣಾಮಾತ್ಮಕ ನೀತಿಶಾಸ್ತ್ರ

(B) ಕರ್ತವ್ಯ ಪರಿಕಲ್ಪನೆಯನ್ನು ಆಧರಿಸಿದ ನೀತಿಶಾಸ್ತ್ರ– ಫಲನಿರಪೇಕ್ಷತಾ ನೀತಿಶಾಸ್ತ್ರ

(C) ಸದ್ಗುಣ ಪರಿಕಲ್ಪನೆಯನ್ನು ಪ್ರಮುಖವೆಂದು ಪರಿಗಣಿಸುವ ನೀತಿ ಸಿದ್ಧಾಂತ – ಸದ್ಗುಣ ನೀತಿಶಾಸ್ತ್ರ

(D) ''ತೃಪ್ತನಾದ ಹಂದಿಗಿಂತಲೂ ಅತೃಪ್ತನಾದ ಸಾಕ್ರೆಟೀಸನು ಉತ್ತಮ'' ಎಂಬುದು ಇದಕ್ಕೆ ಸಂಬಂಧಿಸಿದೆ – ನೈಸರ್ಗಿಕ ನೀತಿಶಾಸ್ತ್ರ

**69.** ಸರಿಯಾದ ಕ್ರಮವನ್ನು(ಕಾಲಕ್ಕೆ ಅನುಗುಣವಾಗಿ) ಆಯ್ಕೆ ಮಾಡಿ.

I. ದ ಮೆಥಡ್ಸ್ ಆಫ್ ಎಥಿಕ್ಸ್

II. ಕ್ರಿಟಿಕ್ ಆಫ್ ಪ್ರಾಕ್ಟಿಕಲ್ ರೀಸನ್

III. ಕ್ರಿಟಿಕ್ ಆಫ್ ಜಡ್ಜ್‌ಮೆಂಟ್

IV. ದ ಫಂಡಮೆಂಟಲ್ ಪ್ರಿನ್ಸಿಪಲ್ಸ್ ಆಫ್ ದ ಮೆಟಫಿಸಿಕ್ಸ್ ಆಫ್ ಮಾರಲ್ಸ್

**ಸಂಕೇತಗಳು :**

(A) IV, II, III, I

(B) I, II, III, IV

(C) III, II, I, IV

(D) II, III, IV, I

**70.** ''ಪರೀಕ್ಷೆಗೆ ಒಳಪಡದ ಬದುಕು ಬದುಕಲು ಯೋಗ್ಯವಲ್ಲ''. ಈ ಹೇಳಿಕೆಯನ್ನು ನೀಡಿದವರಾರು ?

(A) ಕ್ಯಾಂಟ್

(B) ಬೆಂಥೆಮ್

(C) ಜಿ. ಇ. ಮೂರ್

(D) ಸಾಕ್ರೆಟೀಸ್

**66.** **Assertion (A)** : According to Prabhakara, every knowledge is true and nothing false ever appears in any error.

**Reason (R)** : Error is due to lapse of memory and we dont distinguish between object of perception and object of memory.

(A) Both (A) and (R) are true and (R) is the correct explanation of (A)

(B) Both (A) and (R) are true and (R) is not the correct explanation of (A)

(C) (A) is true and (R) is false

(D) (A) is false and (R) is true

**67.** Which one of the following pairs is correctly matched ?

(A) Refutation of naturalistic ethical theories by a famous device known as "Open Question Technique" is propounded by – Sidgwick

(B) In Book X of the Nicomachean Ethics, Aristotle extols the life of study as the essential realization of – Eudaimonia

(C) The evaluation of something as good or bad is seen as expressing belief – Attitude theories of ethics

(D) The view that the truth of ethical claims is relative to the way of life of those who hold them – Ethical objectivism

**68.** Which one of the following pairs is not correctly matched ?

(A) The view that the value of an action derives entirely from the value of its consequences – Consequentialist ethics

(B) Ethics based on the notion of duty – De-ontological ethics

(C) The theory of ethics that takes the notion of virtue as primary – Virtue ethics

(D) 'Better a Socrates dissatisfied than a Pig satisfied' relates to – Naturalistic ethics

**69.** Arrange the following books inorder in which they appeared. Use the code given below.

I. The methods of ethics.

II. Critique of practical reason.

III. Critique of judgement.

IV. The Fundamental Principles of the Metaphysics of Morals.

**Codes :**

(A) IV, II, III, I

(B) I, II, III, IV

(C) III, II, I, IV

(D) II, III, IV, I

**70.** "The unexamined life is not worth living". Who said this statement ?

(A) Kant

(B) Bentham

(C) G. E. Moore

(D) Socrates

**71.** ಗರಿಷ್ಠ ಪ್ರಯೋಜನ ಇಲ್ಲವೇ ಸುಖಕ್ಕೋಸ್ಕರ ಏನು ಮಾಡಬೇಕು ಅಥವಾ ಹೇಗೆ ಬದುಕಬೇಕೆಂಬ ಪ್ರಶ್ನೆಗಳಿಗೆ ಉತ್ತರಿಸುವ ನೈತಿಕ ಸಿದ್ಧಾಂತವೆಂದರೆ

(A) ಪ್ರತಿಭಾವನಾತ್ಮಕವಾದ

(B) ಭಾವನಾತ್ಮಕವಾದ

(C) ಪ್ರಯೋಜನವಾದ

(D) ನಿಯೋಜಕವಾದ

**72.** ಸಾರ್ವತ್ರಿಕ ನಿಯಮ, ನೈಸರ್ಗಿಕ ನಿಯಮ, ಉದ್ದೇಶ, ಸ್ವಾಯತ್ತತೆ, ಗುರಿಗಳ ಸಾಮ್ರಾಜ್ಯ – ಈ ಸೂತ್ರಗಳು ___________ ನ ವಿವಿಧ ರೂಪಗಳಾಗಿವೆ.

(A) ಪದಾರ್ಥ ಪ್ರಮಾದ

(B) ನಿರುಪಾಧಿತ ವಿಧಿ

(C) ಸೋಪಾಧಿತ ವಿಧಿ

(D) ಧರ್ಮಸಂಕಟ ಮೀಮಾಂಸೆ

**73.** ___________ ಪ್ರಕಾರ ಇಚ್ಛಾ ಸ್ವಾತಂತ್ರ್ಯ, ಆತ್ಮದ ಅಮರತೆ ಮತ್ತು ಈಶ್ವರ – ಇವು ನೀತಿಶಾಸ್ತ್ರದ ಆಧಾರ ತತ್ವಗಳು.

(A) ಬೆಂಥೆಮ್

(B) ಸ್ಟೀವೆನ್‌ಸನ್

(C) ಕ್ಯಾಂಟ್

(D) ಜಿ. ಇ. ಮೂರ್

**74.** ಇಂದ್ರೀಯ ಸುಖವೇ ಜೀವನದ ಪರಮಗುರಿಯೆಂದು ಸಾರುವ ನೈತಿಕ ಸಿದ್ಧಾಂತವನ್ನು___________ ಎಂದು ಕರೆಯುತ್ತಾರೆ.

(A) ಭಾವನಾತ್ಮಕವಾದ

(B) ಸುಖಧ್ಯೇಯವಾದ

(C) ಪ್ರತಿಭಾವನಾತ್ಮಕವಾದ

(D) ಪ್ರಯೋಜನವಾದ

**75.** ಹೊಂದಿಸಿ ಬರೆಯಿರಿ :

| | |
|---|---|
| a. ಮನೋವೈಜ್ಞಾನಿಕ ಸುಖಧ್ಯೇಯವಾದ | i. ಮನುಷ್ಯರು ಯಾವಾಗಲೂ ಇಂದ್ರೀಯ ಸುಖವನ್ನೇ ಅರಸಬೇಕು |
| b. ನೈತಿಕ ಸುಖಧ್ಯೇಯವಾದ | ii. ಮನುಷ್ಯರು ಯಾವಾಗಲೂ ಇಂದ್ರೀಯ ಸುಖವನ್ನೇ ಅರಸುತ್ತಾರೆ |
| c. ಸ್ವಸುಖಧ್ಯೇಯವಾದ | iii. ಪ್ರತಿಯೊಬ್ಬನೂ ಎಲ್ಲರ ಇಂದ್ರೀಯ ಸುಖವನ್ನೂ ಅರಸಬೇಕು |
| d. ಸಾರ್ವತ್ರಿಕ ಸುಖಧ್ಯೇಯವಾದ | iv. ಪ್ರತಿಯೊಬ್ಬನೂ ತನ್ನ ಸುಖವನ್ನೇ ಅರಸುತ್ತಾನೆ |

**ಸಂಕೇತಗಳು :**

| | a | b | c | d |
|---|---|---|---|---|
| (A) | 2 | 1 | 4 | 3 |
| (B) | 1 | 2 | 3 | 4 |
| (C) | 3 | 4 | 2 | 1 |
| (D) | 4 | 2 | 1 | 3 |

**71.** The ethical theory that answers questions of what to do or how to live, in terms of maximizing utility or happiness is known as

(A) Intuitionism

(B) Emotivism

(C) Utilitarianism

(D) Preseriptivism

**72.** The formula of universal law, the formula of the law of nature, the formula of the end-in-itself, the formula of autonomy, the formula of the Kingdom of ends are the different formulations of

(A) Category mistake

(B) The categorical imperative

(C) The hypothetical imperative

(D) Casuistry

**73.** Freedom of the will, immorality of the soul and God are the postulates of ethics according to

(A) Bentham

(B) Stevenson

(C) Kant

(D) G. E. Moore

**74.** _________ is the term for those ethical theory that regard happiness or pleasure as the supreme end of life.

(A) Emotivism

(B) Hedonism

(C) Intuitionism

(D) Utilitarianism

**75.** Match the following :

| | |
|---|---|
| a. Psychological hedonism | 1. Men ought always to seek pleasure |
| b. Ethical hedonism | 2. Men always do seek pleasure |
| c. Egoistic hedonism | 3. What each ought to seek is the pleasure of all human beings |
| d. Universalistic hedonism | 4. What each man seeks is his own pleasure |

**Codes :**

| | a | b | c | d |
|---|---|---|---|---|
| (A) | 2 | 1 | 4 | 3 |
| (B) | 1 | 2 | 3 | 4 |
| (C) | 3 | 4 | 2 | 1 |
| (D) | 4 | 2 | 1 | 3 |

ಚಿತ್ತು ಬರಹಕ್ಕಾಗಿ ಸ್ಥಳ
Space for Rough Work